ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ನೋಡೆಲ್ ಅಧಿಕಾರಿಗಳು/ಸಹಾಯಕ ಅಭಿಯಂತರರ ಕಛೇರಿ ನಾಗಪುರ ಉಪವಿಭಾಗ, ಬಿ.ಬಿ.ಎಂ.ಪಿ.,
12ನೇ ಮುಖ್ಯರಸ್ತೆ, 11ನೇ ಕ್ರಾಸ್, ನಾಗಪುರ, ಬಿಬಿಎಂಪಿ ಕಛೇರಿ ಸಂಕೀರ್ಣ ಕಟ್ಟಡ, ಮಹಾಲಕ್ಷ್ಮೀಲೇಔಟ್,ಬೆಂಗಳೂರು-86.

# ದಿನಾಂಕ:-18-09-2021ರಂದು ನಡೆದ ವಾರ್ಡ್ ಸಂಖ್ಯೆ:67ರ ವಾರ್ಡ್ ಸಮಿತಿ ಸಭೆಯ ನಡವಳಿ

ಉಲ್ಲೇಖ:- (1) ಸಮಿತಿ ಸಭೆ ಸೂಚಿ ಪತ್ರ ಸಂಖ್ಯ :ಬಿ12(5)/ಪಿಆರ್/35/2020-21 ದಿನಾಂಕ:21:09:2020
(2)ಸಭೆ ಸೂಚನಾ ಪತ್ರ ಸಂ. ಸ.ಅ./ವಾ-67/ಪಿ.ಆರ್./28/2021-22 ದಿನಾಂಕ:16-09-2021

| ಕ್ರ.ಸ. | ಶ್ರೀಯುತರ ಹೆಸರು | ಹುದ್ದೆ |
|---|---|---|
| 1. | ಶ್ರೀ. ವಿಶ್ವನಾಥ್ | ಮುಖ್ಯ ಅಭಿಯಂತರರು (ಪಶ್ಚಿಮ) ಬಿಬಿಎಂಪಿ ನೋಡೆಲ್ ಅಧಿಕಾರಿಗಳು ಹಾಗೂ ವಾರ್ಡ್ ಸಮಿತಿ ಅಧ್ಯಕ್ಷರು, ವಾರ್ಡ್ ಸಂಖ್ಯೆ:67 |
| 2. | ಶ್ರೀ ಬಿ.ಸಿ ರವಿಕುಮಾರ್ | ಸಹಾಯಕ ಅಭಿಯಂತರರು ವಾರ್ಡ್-67 ಹಾಗು ಸಮಿತಿ ಕಾರ್ಯದರ್ಶಿಗಳು |
| 3. | ಶ್ರೀ. ಲಕ್ಷ್ಮೀಕಾಂತ್ | ವಾರ್ಡ್ ಸಮಿತಿ ಸದಸ್ಯರು |
| 4. | ಶ್ರೀಮತಿ. ಗೀತಾ ಕೀನಾಲ್ | ವಾರ್ಡ್ ಸಮಿತಿ ಸದಸ್ಯರು |
| 5. | ಶ್ರೀಮತಿ. ಮಂಜುಳಾ | ವಾರ್ಡ್ ಸಮಿತಿ ಸದಸ್ಯರು |
| 6. | ಶ್ರೀ ಉದಯ ಶಂಕರ್ | 1ನೇ ಆರ್ ಬ್ಲಾಕ್ ನಿವಾಸಿಗಳ ಕ್ಷೇಮಾಭಿವೃಧಿ ಸಂಘ. |
| 7. | ಶ್ರೀ. ಗಂಗಯ್ಯ | ಹಿರಿಯ ಆರೋಗ್ಯ ಪರೀವಿಕ್ಷಕರು. ವಾರ್ಡ್-67 |
| 8. | ಶ್ರೀ. ಛಾಯಪತಿ | ಕಿರಿಯ ಆರೋಗ್ಯ ಪರೀವಿಕ್ಷಕರು. ವಾರ್ಡ್-67 |
| 9. | ಶ್ರೀ. ರಾಜ್‌ಗೋಪಾಲ್ | ಕಂದಾಯ ಪರೀವಿಕ್ಷಕರು. ವಾರ್ಡ್-67 |
| 10. | ಶ್ರೀ. ಸುನೀಲ್ | ಮಾಷಲ್ ವಾರ್ಡ್ ಸಂಖ್ಯೆ-67. |
| 11. | ಶ್ರೀ. ಮಂಜುನಾಥ್ | ತೋಟಗಾರಿಕೆ ಇಲಾಕೆ (ಮೇಸ್ತ್ರೀ) |
| 12. | ಶ್ರೀ.ಕುಮಾರ್. ಆರ್ | ಸಹಾಯಕ ಪೋಲಿಸ್ ಇನ್ಸ್‌ಪೆಕ್ಟರ್ ಮಹಾಲಕ್ಷ್ಮೀಲೇಔಟ್ ಪೋಲಿಸ್ ಠಾಣೆ |
| 13. | ಶ್ರೀ. ಕೆ ಗಂಗಚೆಲುವಚ್ಯು | ಬೆಂಗಳೂರು ಜಲ ಮಂಡಳಿ. |
| 14. | ಶ್ರೀ. ಮುನಿಸ್ವಾಮಯ್ಯ | ಸಹಾಯಕ ಪೋಲಿಸ್ ಇನ್ಸ್‌ಪೆಕ್ಟರ್ ಮಲ್ಲೇಶ್ವರಂ (ಸಂಚಾರಿ) ಪೋಲಿಸ್ ಠಾಣೆ. |
| 15. | ಶ್ರೀ. ತಿಮ್ಮಯ್ಯ. ಡಿ | ವಾರ್ಡ್ ನಾಗರೀಕರು |
| 16. | ಶ್ರೀ. ಹೆ.ಚ್ ಮಲ್ಲಿಕಾರ್ಜುನ್ | ವಾರ್ಡ್ ನಾಗರೀಕರು |
| 17. | ಶ್ರೀ. ಪ್ರಸನ್ನ ಕುಮಾರ್ | ಪೋಲಿಸ್ ಕಾನ್ಸ್‌ಟೆಬಲ್ ಮಲ್ಲೇಶ್ವರಂ (ಸಂಚಾರಿ) ಪೋಲಿಸ್ ಠಾಣೆ. |



ಮು.ತಿ.ನೋ

Scanned by CamScanner

| | | |
|---|---|---|
| 18. | ಶ್ರೀ. ನಾಗರಾಜ್ | ಸಹಾಯಕ ಅಭಿಯಂತರರು. ಬೆಂ.ಜ.ಮಂ |
| 19. | ಶ್ರೀ. ಹರೀಶ್ ನಾಯಕ್ | ಸಹಾಯಕ ಅಭಿಯಂತರರು. ಬೆಂ.ಜ.ಮಂ |
| 20. | ಶ್ರೀ. ಮಲ್ಲಯ್ಯ | ಅರಣ್ಯ ಇಲಾಖೆ ಗುತ್ತಿಗೆದಾರರ ಸಿಬ್ಬಂದಿ |
| 21. | ಶ್ರೀ. ಶ್ರೀನಿವಾಸ್ ಗೌಡ | ಘ.ತ್ಯಾ.ನಿ ಗುತ್ತಿಗೆದಾರರು. |
| 22. | ಶ್ರೀ. ಸತೀಶ್ | ಬೀದಿ ದೀಪ ಗುತ್ತಿಗೆದಾರರು. |

ವಾರ್ಡ್ ಸಮಿತಿ ಸಭೆಯ ಕಾರ್ಯದರ್ಶಿಗಳು ಮಾತನಾಡಿ ಸೆಪ್ಟೆಂಬರ್ ಮಾಹೆಯ ಮೂರನೇ ಶನಿವಾರ ದಿ:18/09/2021 ರಂದು ಬೆಳಿಗ್ಗೆ 9.30 ಘಂಟೆಗೆ ವಾರ್ಡ್ ಸಮಿತಿ ಸಭೆಯನ್ನು ಕರೆಯಲಾಗಿದ್ದು, ವಾರ್ಡ್ ಅಭಿವೃದ್ಧಿ ಹಾಗೂ ಕುಂದುಕೊರತೆಗಳ ಬಗ್ಗೆ ಚರ್ಚಿಸಲು ಕರೆದಿರುವ ಸಭೆಗೆ ಆಗಮಿಸಿರುವ ಮಾನ್ಯ ವಾರ್ಡ್ ಸಮಿತಿ ಅಧ್ಯಕ್ಷರು, ಮತ್ತು ಸಮಿತಿ ಸದಸ್ಯರಿಗೆ ಸ್ವಾಗತ ಕೋರಿದರು. ಹಾಗೂ ವಾರ್ಡ್ ಸಂಖ್ಯೆ:67ರ ವಾಸ್ತವದ ಬಗ್ಗೆ ಕಿರು ಪರಿಚಯವನ್ನು ಮಂಡಿಸಿದರು.

ಮಾನ್ಯ ವಾರ್ಡ್ ಸಮಿತಿ ಅಧ್ಯಕ್ಷರು, ಮಾತನಾಡಿ ಸಮಿತಿಯ ಸದಸ್ಯರು ಮತ್ತು ಸ್ಥಳೀಯ ಸಾರ್ವಜನಿಕರು ತಮ್ಮ ತಮ್ಮ ಅವಹಾಲುಗಳನ್ನು ತಿಳಿಸಬೇಕೆಂದು ತಿಳಿಸಿದ ಹಿನ್ನೆಲೆಯಲ್ಲಿ ಸಮಿತಿಯ ಸದಸ್ಯರು ಈ ಕೆಳಕಂಡಂತೆ ವಾರ್ಡ್‌ನಲ್ಲಿ ಕಂಡುಬಂದಿರುವ ಸಮಸ್ಯೆಗಳನ್ನು ಸಭೆಗೆ ಮಂಡಿಸಿದರು.

**<u>ಸಭೆಯಲ್ಲಿ ಚರ್ಚಿಸಲಾದ ವಿಷಯಗಳು:</u>**

| | |
|---|---|
| ಶ್ರೀ ಉದಯ ಶಂಕರ್<br>ವಾರ್ಡ್ ಸಮಿತಿ ಸದಸ್ಯರು. | ವಾರ್ಡ್‌ನ ರಾಜಾಜಿನಗರ 1ನೇ 'ಆರ್' ಬ್ಲಾಕ್‌ನ ಪ್ಯಾಥಕಾಂನ್ ಡಯಗ್ನಾಸ್ಟಿಕ್ಸ್ ಹತ್ತಿರ ರಸ್ತೆಯ ನೀರು ಸರಾಗವಾಗಿ ಹರಿಯುವುದಕ್ಕಾಗಿ ವೆಟ್ ಮಿಕ್ಸ್ ಹಾಕಿ ತಾತ್ಕಾಲಿಕ ಪರಿಹಾರವನ್ನು ಸಹಾಯಕ ಅಭಿಯಂತರರು ವಾಡ್-67ರವರು ನೀಡಿದ್ದಾರೆ ಅದೇ ಜಾಗದಲ್ಲಿ ಹೋಸದಾಗಿ ಕಾಂಕ್ರೀಟ್ ಕಲ್ವಟ್ ಮಾಡುವುದರಿಂದ ನೀರು ಸರಾಗವಾಗಿ ಹರಿಯುವುದು ಹಾಗು ವಾಹನ ಸವಾರರಿಗೆ ಅನುಕುಲವಾಗುವುದು ಎಂದು ಸಭೆಯಲ್ಲಿ ಪ್ರಸ್ತಾಪಿಸಿದರು. |
| ಶ್ರೀ ಬಿ.ಸಿ ರವಿಕುಮಾರ್<br>ಸಹಾಯಕ ಅಭಿಯಂತರರು<br>ವಾಡ್-67 ಹಾಗು ಸಮಿತಿ<br>ಕಾರ್ಯದರ್ಶಿಗಳು | ವಾರ್ಡ್‌ನ ರಾಜಾಜಿನಗರ 1ನೇ 'ಆರ್' ಬ್ಲಾಕ್‌ನ ಪ್ಯಾಥಕಾಂನ್ ಡಯಗ್ನಾಸ್ಟಿಕ್ಸ್ ಹತ್ತಿರ ಹೊಸದಾಗಿ ಕಾಂಕ್ರೀಟ್ ಚರಂಡಿಯನ್ನು ಟೆಂಡರ್ ಷ್ಯೂರ್ ಇಲಾಖೆಯವರು ನಿರ್ಮಿಸುತ್ತಿದ್ದು ಕಲ್ವಟ್ ನಿರ್ಮಾಣ ಮಾಡಲು ಸದರಿರವರಿಗೆ ಈಗಾಗಲೆ ತಿಳಿಸಿದ್ದೇವೆ ಎಂದು ಮಾಹಿತಿ ಒದಗಿಸಿದರು. |
| ಶ್ರೀ.ವಿಶ್ವನಾಥ್<br>ನೋಡೆಲ್ ಅಧಿಕಾರಿಗಳು | ವಾರ್ಡ್‌ನ ರಾಜಾಜಿನಗರ 1ನೇ ಬ್ಲಾಕ್‌ನ 19ನೇ ಮೈನ್ ಹತ್ತಿರ ಕಸ ಹಾಕಿದವರ ವಿರುದ್ಧ ಮಾರ್ಷಲ್ ದಂಡ ಹಾಕಿ ಹಾಗು ಸದರಿ ಜಾಗದಲ್ಲಿ ಹೆಚ್ಚು ಪ್ಯಾಟ್ರೋಲಿಂಗ್ ಮಾಡಬೇಕು ಎಂದು ತಿಳಿಸಿದರು. |
| ಶ್ರೀ. ಸುನೀಲ್<br>ಮಾರ್ಷಲ್ ವಾರ್ಡ್ ಸಂಖ್ಯೆ-67. | ವಾರ್ಡ್‌ನ ನೋಡೆಲ್ ಅಧಿಕಾರಿಗಳು ಸೂಚಿಸಿರುವಂತೆ ಕ್ರಮವಹಿಸಲಾಗುವುದಾಗಿ ತಿಳಿಸಿದರು. |
| ಶ್ರೀ ಉದಯ ಶಂಕರ್<br>ವಾರ್ಡ್ ಸಮಿತಿ ಸದಸ್ಯರು. | ವಾರ್ಡ್‌ನ 1ನೇ ಆರ್ ಹಾಗು ಎನ್ ಬ್ಲಾಕ್ ನಿವಾಸಿಗಳ ಕ್ಷೇಮಾಭಿವೃಧಿ ಸಂಘದ ವತಿಯಿಂದ ಹಮ್ಮಿಕೊಳಲಾಗಿರುವ ತ್ಯಾಜ್ಯ ಬೇರ್ಪಡಿಸುವ ಬಗ್ಗೆ ಜಾಗ್ರತಿ ಅಭಿಯಾನವನ್ನು ಆಯೋಜಿಸಿದ್ದು ಕರ್ಯಕ್ರಮಕ್ಕೆ ವಾರ್ಡ್‌ನ ಎಲ್ಲಾ ಅಧಿಕಾರಿಗಳು ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಲು ಆವಹಾನಿಸಿದರು. |

ವಿಶ್ವನಾಥ್.ಹು



ಮು.ತಿ.ನೋ.

Scanned by CamScanner

| | |
|---|---|
| ಶ್ರೀ.ವಿಶ್ವನಾಥ್ ನೋಡೆಲ್ ಅಧಿಕಾರಿಗಳು | ವಾರ್ಡ್‌ನ ಎಲ್ಲಾ ಮನೆಗಳಿಗೆ ಮಳೆನೀರು ಹಿಂಗು ಗುಂಡಿಯನ್ನು ಅಳವಡಿಸುವುದು ಕಡ್ಡಾಯವಾಗಿ ಮಾಡಬೇಕು ಇಲ್ಲವಾದಲ್ಲಿ ಬೆಂ.ಜ.ಮಂ ರವರು ದಂಡ ಹಾಕಬೇಕು ಎಂದು ಸಭೆಯಲ್ಲಿ ಪ್ರಸ್ತಾಪಿಸಿದರು. |
| ಶ್ರೀ. ನಾಗರಾಜ್ ಹಾಗು ಶ್ರೀ. ಹರೀಶ್ ನಾಯಕ್ | ವಾರ್ಡ್‌ನಲ್ಲಿ ಎಲ್ಲಾ ಮನೆಗಳಿಗೆ ಮಳೆನೀರು ಹಿಂಗು ಗುಂಡಿಯನ್ನು ಅಳವಡಿಸುವುದು ಕಡ್ಡಾಯ ಇಲ್ಲದಿದ್ದವರ ಮನೆಗೆ ಈಗಾಗಲೇ ದಂಡ ಹಾಕಲಾಗುತ್ತಿದೆ ಎಂದು ಮಾಹಿತಿ ಒದಗಿಸಿದರು. |
| ಶ್ರೀ. ಲಕ್ಷ್ಮೀಕಾಂತ್ ವಾರ್ಡ್ ಸಮಿತಿ ಸದಸ್ಯರು | ವಾರ್ಡ್‌ನ 15ನೇ ಮುಖ್ಯರಸ್ತೆ ಮಹಾಲಕ್ಷ್ಮೀಪುರಂನಲ್ಲಿ ಓಂ ಗಣೇಶ್ ಟ್ಯುಟೋರಿಯಲ್ ನೆಡೆಸುತ್ತಿದ್ದು ಅದರಿಂದ ತುಂಬ ಶಬ್ಧ ವಾಗುತ್ತಿದ್ದು ಹಾಗು ಪಾರ್ಕಿಂಗ್ ಸಮಸ್ಯೆಯಾಗುತಿದೆ ಇದರಿಂದ ಅಕ್ಕ ಪಕ್ಕ ಮನೆಯವರಿಗೆ ತುಂಬ ತೊಂದರೆ ಉಂಟಾಗುತ್ತಿದೆ, ಪೋಲಿಸ್ ಠಾಣೆಯಲ್ಲಿ ದೂರು ಕೊಟಿದ್ದೇವೆ ಎಂದು ಸಭೆಯಲ್ಲಿ ಪ್ರಸ್ತಾಪಿಸಿದರು. |
| ಶ್ರೀ.ಕುಮಾರ್. ಆರ್ ಸಹಾಯಕ ಪೋಲಿಸ್ ಇನ್ಸಪೆಕ್ಟರ್ ಮಹಾಲಕ್ಷ್ಮೀಲೇಔಟ್ ಪೋಲಿಸ್ ಠಾಣೆ | ವಾರ್ಡ್‌ನ ಸಮಿತಿ ಸದಸ್ಯರ ದೂರಿನ ಕುರಿತು 15ನೇ ಮುಖ್ಯರಸ್ತೆ ದೂರಿನ ಕುರಿತು ಮಾಹಿತಿ ಪಡೆದು ಕ್ರಮವಹಿಸಲಾಗುವುದಾಗಿ ಸಭೆಯಲ್ಲಿ ತಿಳಿಸಿದರು. |
| ಶ್ರೀಮತಿ. ಗೀತಾ ಕೇನಾಲ್ ವಾರ್ಡ್ ಸಮಿತಿ ಸದಸ್ಯರು | ವಾರ್ಡ್‌ನ ರಾಜಾಜಿನಗರ 1ನೇ ಬ್ಲಾಕ್‌ನ ಗಣೇಶ ದೇವಾಲಯದ ಹತ್ತಿರ ಪಾರ್ಕಿಂಗ್ ಸಮಸ್ಯೇ ಇದ್ದು ಸಾರ್ವಜನಿಕರಿಗೆ ಬಹಳ ತೊಂದರೆ ಉಂಟಾಗುತ್ತಿದೆ ಎಂದು ಸಭೆಯಲ್ಲಿ ಪ್ರಸ್ತಾಪಿಸಿದರು. |
| ಶ್ರೀ. ವಿಶ್ವನಾಥ್ ನೋಡೆಲ್ ಅಧಿಕಾರಿಗಳು | ವಾರ್ಡ್‌ನ ಸಮಿತಿ ಸದಸ್ಯರ ದೂರಿಗೆ ಸಂಭಂದಿಸಿದಂತೆ ಮಲ್ಲೇಶ್ವರಂ ಪೋಲಿಸ್ ಠಾಣೆ(ಸಂಚಾರಿ)ಯವರು ಕ್ರಮವಹಿಸಲು ಸೂಚಿಸಿದರು. |
| ಶ್ರೀ. ಮುನಿಸ್ವಾಮಯ್ಯ ಸಹಾಯಕ ಪೋಲಿಸ್ ಇನ್ಸಪೆಕ್ಟರ್ ಮಲ್ಲೇಶ್ವರಂ (ಸಂಚಾರಿ) ಪೋಲಿಸ್ ಠಾಣೆ. | ವಾರ್ಡ್‌ನ ರಾಜ್‌ಕುಮಾರ್ ರಸ್ತೆಯಲ್ಲಿ ಒರಿಯನ್ ಮಾಲ್ ಎದುರು ಬೆಂ.ಜ.ಮಂ ರವರು ಪೈಪ್‌ಲೈನ್ ಅಳವಡಿಸಲು ರಸ್ತೆ ಅಗೆದು ದೂರಸ್ತಿ ಮಾಡಿರುವುದಿಲ್ಲ ಇದರಿಂದ ವಾಹನ ಸವಾರರಿಗೆ ತೀರ ತೊಂದರೆ ಉಂಟಾಗುತ್ತಿರುತ್ತದೆ. |
| ಶ್ರೀ. ಹರೀಶ್ ನಾಯಕ್ ಸಹಾಯಕ ಅಭಿಯಂತರರು. ಬೆಂ.ಜ.ಮಂ | ವಾರ್ಡ್‌ನ ರಾಜ್‌ಕುಮಾರ್ ರಸ್ತೆಯ ದೂರಿನ ಕುರಿತು ನಮ್ಮ ಇಲಾಖೆ ವತಿಯಿಂದ ಈಗಾಗಲೇ ನಾವು 3 ಭಾರಿ ವೆಟ್ ಮಿಕ್ಸ್ ಹಾಕಲಾಗಿದೆ ರಸ್ತೆಯನ್ನು ರಸ್ತೆ ಮೂಲಭೂ ಸೌಕರ್ಯರವರು ಢಾಂಬರಿಕರಣ ಮಾಡಬೇಕಾಗಿ ಸಭೆಯಲ್ಲಿ ತಿಳಿಸಿದರು. |
| ಶ್ರೀ. ವಿಶ್ವನಾಥ್ ನೋಡೆಲ್ ಅಧಿಕಾರಿಗಳು | ವಾರ್ಡ್‌ನ ಸದರಿ ರಸ್ತೆಯನ್ನು ತಾಂತ್ರಿಕವಾಗಿ ಗುಂಡಿಯನ್ನು ಮುಚ್ಚಲು ರಸ್ತೆ ಮೂಲಭೂ ಸೌಕರ್ಯ ಕಾರ್ಯಪಾಲಕ ಅಭಿಯಂತರರಿಗೆ ದೂರವಾಣಿ ಮೂಖೇನ ತಿಳಿಸಿದರು. |
| ಶ್ರೀ. ಪ್ರಸನ್ನ ಕುಮಾರ್ ಪೋಲಿಸ್ ಕಾನ್ಸ್‌ಟೆಬಲ್ ಮಲ್ಲೇಶ್ವರಂ (ಸಂಚಾರಿ) ಪೋಲಿಸ್ ಠಾಣೆ. | ವಾರ್ಡ್‌ನ ರಾಜಾಜಿನಗರ 1ನೇ ಬ್ಲಾಕ್‌ನ ಫ್ಲೈಓವರ್ ಮೇಲೆ ದೀಪಗಳು ಉರಿಯುತ್ತಿರುವುದಿಲ್ಲ ಇದರಿಂದ ಕಳೆದ ವಾರ ರಸ್ತೆ ಅಪಘಾತ ಸಂಭವಿಸಿದೆ ಕೂಡಲೇ ಕ್ರಮ ತೆಗೆದುಕೊಳಲು ತಿಳಿಸಿದರು. |
| ಶ್ರೀ. ಸತೀಶ್ ಬೀದಿ ದೀಪ ಗುತ್ತಿಗೆದಾರರು. | ವಾರ್ಡ್‌ನ ರಾಜಾಜಿನಗರ 1ನೇ ಬ್ಲಾಕ್‌ನ ಫ್ಲೈಓವರ್ ಮೇಲಿನ ದೂರಿಗೆ ಸಂಭಂದಿಸಿದಂತೆ ಕೂಡಲೇ ಕ್ರಮ ವಹಿಸಲಾಗುವುದಾಗಿ ತಿಳಿಸಿದರು. |
| ಶ್ರೀ. ಲಕ್ಷ್ಮೀಕಾಂತ್ ವಾರ್ಡ್ ಸಮಿತಿ ಸದಸ್ಯರು | ವಾರ್ಡ್‌ನ 15ನೇ ಅಡ್ಡ ರಸ್ತೆಯಲ್ಲಿ ಸ್ಯಾನಿಟರಿ ಲೈನ್ ಹಳೆಯದಾಗಿದ್ದು ಹೊಸ ಪೈಪ್ ಲೈನ್ ಅಳವಡಿಸಲು ಸಭೆಯಲ್ಲಿ ಪ್ರಸ್ತಾಪಿಸಿದರು. |

ಮು.ತಿ.ನೋ.



ವಿಶ್ವನಾಥ.ಹು

Scanned by CamScanner

| | |
|---|---|
| ಶ್ರೀ. ಹರೀಶ್ ನಾಯಕ್ ಸಹಾಯಕ ಅಭಿಯಂತರರು. ಬೆಂ.ಜ.ಮಂ | ವಾರ್ಡ್‌ನ ವಾರ್ಡ್ ಸಮಿತಿ ಸದಸ್ಯರ ದೂರಿಗೆ ಸಂಭಂದಿಸಿದಂತೆ ಕ್ರಮ ವಹಿಸಲಾಗುವುದಾಗಿ ತಿಳಿಸಿದರು. |
| ಶ್ರೀ. ತಿಮ್ಮಯ್ಯ ಡಿ ವಾರ್ಡ್ ನಾಗರೀಕರು | ವಾರ್ಡ್‌ನ 8ನೇ ಮುಖ್ಯ ರಸ್ತೆಯಲ್ಲಿ ಕಲ್ವರ್ಟ್ ಚಪ್ಪಡಿ ಮುರಿದಿದೆ ಹಾಗು ಬ್ಲಾಕ್ ಆಗಿರುತ್ತದೆ ಇದರಿಂದ ವಾಹನ ಸವಾರರಿಗೆ ಬಹಳ ತೊಂದರೆ ಉಂಟಾಗುತ್ತಿದೆ ಎಂದು ಸಭೆಯಲ್ಲಿ ಪ್ರಸ್ತಾಪಿಸಿದರು |
| ಶ್ರೀ ಬಿ.ಸಿ ರವಿಕುಮಾರ್ ಸಹಾಯಕ ಅಭಿಯಂತರರು ವಾರ್ಡ್-67 ಹಾಗು ಸಮಿತಿ ಕಾರ್ಯದರ್ಶಿಗಳು | ವಾರ್ಡ್‌ನ ನಾಗರೀಕರ ದೂರಿಗೆ ಸಂಭಂದಿಸಿದಂತೆ 8ನೇ ಮುಖ್ಯ ರಸ್ತೆಯಲ್ಲಿ ಕಲ್ವರ್ಟ್ ಹಳೆಯದಾಗಿದ್ದು ಚಪ್ಪಡಿ ಕಲ್ಲು ಮುರಿದು ವಾಹನ ಸವಾರರಿಗೆ ಬಹಳ ತೊಂದರೆ ಉಂಟಾಗಿರುತ್ತದೆ ಆದ್ದರಿಂದ ಹೊಸ ಕಲ್ವರ್ಟ್ ನಿರ್ಮಾಣ ಮಾಡುವುದಾಗಿ ಸಭೆಗೆ ಭರವಸೆ ನೀಡಿದರು. |
| ಶ್ರೀ. ಶ್ರೀನಿವಾಸ್ ಗೌಡ ಘ.ತ್ಯಾ.ನಿ ಗುತ್ತಿಗೆದಾರರು. | ವಾರ್ಡನ ಘ.ತ್ಯಾ.ನಿ ಸರಭರಾಜುದಾರರಿಗೆ ಎಪ್ರಿಲ್-2021 ಮಾಹೆಯಿಂದ ಇಲಾಖೆ ವತಿಯಿಂದ ಕಸದ ಬಿಲ್ ಪಾವತಿಮಾಡಿರುವುದಿಲ್ಲ ಹಾಗು ಕೋವಿಡ್-19 (ಸ್ಯಾನಿಟೈಸೇಷನ್) ಬಿಲ್ ಕೇವಲ 70% ಪಾವತಿಮಾಡಿದ್ದು ಇನ್ನು ಬಾಕಿ 30% ಹಣವನ್ನು ಬಿಡುಗಡೆ ಮಾಡಲು ಕೋರಿದರು ಇಲ್ಲವಾದಲ್ಲಿ ಗುತ್ತಿಗೆದಾರರಿಗೆ ಬಹಳ ಸಮಸ್ಯೆ ಉಂಟಾಗುತ್ತಿರುವುದಾಗಿ ಸಭೆಯಲ್ಲಿ ಪ್ರಸ್ತಾಪಿಸಿದರು. |
| ಶ್ರೀ. ಛಾಯಪತಿ ಕಿರಿಯ ಆರೋಗ್ಯ ಪರೀವಿಕ್ಷಕರು. ವಾರ್ಡ್-67 | ವಾರ್ಡ್‌ನಲ್ಲಿ ಬೆಸ್ಕಂರವರು ಮರವನ್ನು ಟ್ರಿಮ್ಮಿಂಗ್ ಮಾಡಿ ರಸ್ತೆ ಮೇಲೆ ಹಾಕಿ ಅದ್ದನ್ನು ತೆರವುಗೊಳಿಸಿರುವುದಿಲ್ಲ ಇದರಿಂದ ಸಾರ್ವಜನಿಕರು ಹಲವಾರು ಬಾರಿ ನಮ್ಮ ವಿಭಾಗಕ್ಕೆ ದೂರು ನೀಡಿರುತ್ತಾರೆ. |
| ಶ್ರೀ. ವಿಶ್ವನಾಥ್ ನೋಡೆಲ್ ಅಧಿಕಾರಿಗಳು | ವಾರ್ಡ್‌ನ ಕಿರಿಯ ಆರೋಗ್ಯ ಪರೀವಿಕ್ಷಕರ ದೂರಿಗೆ ಸಂಭಂದಿಸಿದಂತೆ ಬೆಸ್ಕಂ ಅಧಿಕಾರಿಗಳು ಕ್ರಮವಹಿಸಲು ಸೂಚಿಸಿದರು. |
| ಶ್ರೀ. ವಿಶ್ವನಾಥ್ ನೋಡೆಲ್ ಅಧಿಕಾರಿಗಳು | 2021-22 ಅಯವ್ಯಕ್ಕೆ ಸಂಭಂದಿಸಿದಂತೆ ಪ್ರತಿ ವಾರ್ಡ್‌ಗೆ P.O.W ಅನುದಾನದಡಿಯಲ್ಲಿ 60ಲಕ್ಷಗಳನ್ನು ಮೀಸಲ್ಲಿಟ್ಟಿದ್ದು ಸಹಾಯಕ ಅಭಿಯಂತರರು ಕಾಮಗಾರಿಗಳ ಪಟ್ಟಿಯನ್ನು ಸಭೆಯಲ್ಲಿ ತಿಳಿಸಲು ಸೂಚಿಸಿದರು. |
| ಶ್ರೀ ಬಿ.ಸಿ ರವಿಕುಮಾರ್ ಸಹಾಯಕ ಅಭಿಯಂತರರು ವಾರ್ಡ್-67 ಹಾಗು ಸಮಿತಿ ಕಾರ್ಯದರ್ಶಿಗಳು | ವಾರ್ಡ್‌ನ ಸಹಾಯಕ ಅಭಿಯಂತರರು ವಾರ್ಡ್-67 ರವರು ಮಾತನಾಡುತ್ತಾ, ಸದರಿ ವಾರ್ಡ್ ವ್ಯಾಪ್ತಿಯಲ್ಲಿ ಅಭಿವೃದ್ಧಿ ಕಾಮಗಾರಿಗಳು ಹಾಗೂ ಮೂಲಭೂತ ಸೌಲಭ್ಯಗಳನ್ನು ಒದಗಿಸಲು ಹಾಗೂ ಮೇಲ್ಕಂಡ ಸಮಿತಿ ಸಭೆಯಲ್ಲಿ ವರದಿಯಾದ ದೂರುಗಳಿಗೆ ಅನುಗುಣವಾಗಿ ತೆಗೆದುಕೊಳ್ಳಬಹುದಾದ ಕಾಮಗಾರಿಗಳನ್ನು ವಾರ್ಡ್ ಪರಿವೀಕ್ಷಣೆ ನಡೆಸಿ ಪಟ್ಟಿ ಮಾಡಲಾಗಿದ್ದು, ಸುಮಾರು ತಲಾ 20ಲಕ್ಷಗಳಂತೆ, ಬೋರ್‌ವೆಲ್ ನಿರ್ವಹಣೆಗೆ 20ಲಕ್ಷಗಳು ರಸ್ತೆ ಹಾಗು ಚರಂಡಿ ನಿರ್ವಹಣೆಗೆ 20ಲಕ್ಷಗಳು ಹಾಗು ರಸ್ತೆ ಗುಂಡಿಗಳ ಪಾಟ್ ಹೋಲ್ ಮುಚ್ಚುವುದಕ್ಕೆ 20ಲಕ್ಷಗಳು ಒಟ್ಟು 60.00 ಲಕ್ಷಗಳಷ್ಟು ಅನುದಾನದ ಅಂದಾಜು ಮಾಡಲಾಗಿರುವುದಾಗಿ (ಆಯ್ದುಕೊಳ್ಳಲಾದ ಕಾಮಗಾರಿಗಳ ವಿವರಗಳನ್ನು ಅನುಬಂಧ-1ರಲ್ಲಿ ಲಗತ್ತಿಸಲಾಗಿದೆ.) ಸಭೆಯಲ್ಲಿ ತಿಳಿಸಿದರು |
| ವಾರ್ಡ್ ಸಮಿತಿ ಸದಸ್ಯರು | ಮೇಲ್ಕಂಡ ಕಾಮಗಾರಿಗಳು ವಾರ್ಡ್‌ನಲ್ಲಿ ಅತ್ಯವಶ್ಯಕವಾಗಿದ್ದು ಸದರಿ ಕಾಮಗಾರಿಗಳನ್ನು ಒದಗಿಸಲು ಸಹಾಯಕ ಅಭಿಯಂತರರಿಗೆ ಸಭೆಗೆ ಹಾಜರಿದ್ದ ವಾರ್ಡ್ ಸಮಿತಿ ಸದಸ್ಯರು ತಿಳಿಸಿದರು. |

<u>ಪ್ರತಿಯನ್ನು</u>

1. ಮಾನ್ಯ ವಲಯ ವಿಶೇಷ ಆಯುಕ್ತರು, ಪಶ್ಚಿಮ ವಲಯ ರವರ ಅವಗಾಹನೆಗೆ ತರಲು ಆಪ್ತ ಕಾರ್ಯದರ್ಶಿರವರಿಗೆ ಸಲ್ಲಿಸಿದೆ.
2. ಮಾನ್ಯ ಜಂಟಿ ಆಯುಕ್ತರು, ಪಶ್ಚಿಮ ವಲಯ ರವರ ಅವಗಾಹನೆಗೆ ತರಲು ಆಪ್ತ ಕಾರ್ಯದರ್ಶಿರವರಿಗೆ ಸಲ್ಲಿಸಿದೆ.
3. ಮಾನ್ಯ ಮುಖ್ಯ ಅಭಿಯಂತರರು, ಪಶ್ಚಿಮ ವಲಯ ರವರ ಅವಗಾಹನೆಗೆ ಸಲ್ಲಿಸಿದೆ.
4. ಮಾನ್ಯ ಆರೋಗ್ಯ ಅಧಿಕಾರಿಗಳು, ಪಶ್ಚಿಮ ವಲಯ ರವರ ಅವಗಾಹನೆಗೆ ತರಲು ಮತ್ತು ಅಗತ್ಯ ಕ್ರಮಕ್ಕಾಗಿ ಸಲ್ಲಿಸಿದೆ.
5. ಮಾನ್ಯ ಅಧೀಕ್ಷಕ ಅಭಿಯಂತರರು, (ಘನತ್ಯಾಜ್ಯ ನಿರ್ವಹಣೆ) ಕೇಂದ್ರ ರವರ ಅವಗಾಹನ ಸಲ್ಲಿಸಿದೆ.

ಪು.ತಿ.ನೊ



Scanned by CamScanner

6. ಮಾನ್ಯ ಅರಣ್ಯಾಧಿಕಾರಿಗಳು, ಅರಣ್ಯ ವಿಭಾಗ ರವರಿಗೆ ಅವಗಾಹನೆಗೆ ತರಲು ಮತ್ತು ಅಗತ್ಯ ಕ್ರಮಕ್ಕಾಗಿ ಆಪ್ತ ಸಹಾಯಕರವರಿಗೆ ಸಲ್ಲಿಸಿದೆ.
7. ಮಾನ್ಯ ಅಧೀಕ್ಷಕರು, ತೋಟಗಾರಿಕೆ ಇಲಾಖೆ ರವರ ಅವಗಾಹನೆಗೆ ತರಲು ಹಾಗೂ ಅಗತ್ಯ ಕ್ರಮಕ್ಕಾಗಿ ಸಹಾಯಕರಿಗೆ ಸಲ್ಲಿಸಿದೆ.
8. ಆರೋಗ್ಯ ಅಧಿಕಾರಿಗಳು, (ಪಶ್ಚಿಮ ವಲಯ) ರವರ ಮಾಹಿತಿಗಾಗಿ ಮತ್ತು ಅಗತ್ಯ ಕ್ರಮಕ್ಕಾಗಿ ಸಲ್ಲಿಸಿದೆ.
9. ಕಾರ್ಯಪಾಲಕ ಅಭಿಯಂತರರು, ಮಹಾಲಕ್ಷ್ಮೀಪುರಂ ವಿಭಾಗ ರವರ ಮಾಹಿತಿಗಾಗಿ ಮತ್ತು ಅಗತ್ಯ ಕ್ರಮಕ್ಕಾಗಿ ಸಲ್ಲಿಸಿದೆ.
10. ಕಂದಾಯ ಅಧಿಕಾರಿಗಳು, ಮಹಾಲಕ್ಷ್ಮೀಪುರಂ ವಿಭಾಗ ರವರ ಮಾಹಿತಿಗಾಗಿ ಮತ್ತು ಅಗತ್ಯ ಕ್ರಮಕ್ಕಾಗಿ ಸಲ್ಲಿಸಿದೆ.
11. ಸಹಾಯಕ ಕಾರ್ಯಪಾಲಕ ಅಭಿಯಂತರರು ನಾಗಪುರ ಉಪವಿಭಾಗ ರವರಿಗೆ ಸೂಕ್ತ ಕ್ರಮವಹಿಸಲು ಸಲ್ಲಿಸಿದೆ.
12. ಸಹಾಯಕ ಕಂದಾಯ ಅಧಿಕಾರಿಗಳು ನಾಗಪುರ ಉಪವಿಭಾಗ ರವರ ಮಾಹಿತಿಗಾಗಿ ಮತ್ತು ಅಗತ್ಯ ಕ್ರಮಕ್ಕಾಗಿ ಸಲ್ಲಿಸಿದೆ.
13. ಸಹಾಯಕ ಕಾರ್ಯಪಾಲಕ ಅಭಿಯಂತರರು (ಪರಿಸರ ವಿಭಾಗ) ನಾಗಪುರ ಉಪವಿಭಾಗ ರವರ ಅಗತ್ಯ ಕ್ರಮಕ್ಕಾಗಿ ಸಲ್ಲಿಸಿದೆ.
14. ಕಾರ್ಯಪಾಲಕ ಅಭಿಯಂತರರು, ವಿದ್ಯುತ್ ಪಶ್ಚಿಮ ವಿಭಾಗ ರವರಿಗೆ ಸೂಕ್ತ ಕ್ರಮ ವಹಿಸಲು ಸಲ್ಲಿಸಿದೆ.
15. ಎಲ್ಲಾ ಸಂಬಂಧಪಟ್ಟವರ ಮಾಹಿತಿಗಾಗಿ ಮತ್ತು ಅಗತ್ಯ ಕ್ರಮಕ್ಕಾಗಿ ಸಲ್ಲಿಸಿದೆ.
16. ಕಛೇರಿಯ ಕಡತಕ್ಕೆ.

22/09/21
ಕಾರ್ಯದರ್ಶಿ ಹಾಗೂ
ಸಹಾಯಕ ಅಭಿಯಂತರರು, ವಾರ್ಡ್– 67
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

22/09/21
ಅಧ್ಯಕ್ಷರು ಹಾಗೂ
ನೋಡಲ್ ಅಧಿಕಾರಿಗಳು ವಾರ್ಡ್
ಬೃಹತ್ ಬೆಂಗಳೂರು ಮಹಾನಗರ

Scanned by CamScanner